# ಡಾ॥ ಗುರುಲಿಂಗ ಕಾಪಸೆ

ಗಿರಡ್ಡಿ ಗೋವಿಂದರಾಜರ ನಂತರ ಅಕಾಡೆಮಿಯ ಅಧ್ಯಕ್ಷರಾದವರು ಡಾ॥ ಗುರುಲಿಂಗ ಕಾಪಸೆ, ವಿಮರ್ಶೆ, ಜೀವನ ಚರಿತ್ರೆ, ಪ್ರವಾಸ ಕಥನ, ಸಂಶೋಧನೆ, ಸಂಪಾದನೆ, ಶಿಶು ಸಾಹಿತ್ಯ – ಹೀಗೆ ಸಾರಸ್ವತ ಕ್ಷೇತ್ರದ ಹಲವಾರು ಪ್ರಕಾರಗಳಲ್ಲಿ ವಿಶೇಷ ಕೃಷಿ ಮಾಡಿರುವ ಕಾಪಸೆಯವರು ಭಾಷಾ ಬಾಂಧವ್ಯದ ಕಾರ್ಯ ಚಟುವಟಿಕೆಗಳಲ್ಲೂ ಅತ್ಯಂತ ಕ್ರಿಯಾಶೀಲರಾಗಿ ತಮ್ಮನ್ನು ತೊಡಗಿಸಿಕೊಂಡವರು.

ವಿಮರ್ಶೆ, ಸಾಹಿತ್ಯ, ಸಂಶೋಧನೆ, ಸಂಘಟನೆ – ಹೀಗೆ ಹಲವಾರು ಕ್ಷೇತ್ರಗಳ ಜ್ಞಾನ ಹಾಗೂ ಅನುಭವ ಉಳ್ಳ ಕಾಪಸೆಯವರು ಜೂನ್, ೧೮ ೨೦೦೧ ರಿಂದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡರು.
ಡಾ॥ ಕಾಪಸೆಯವರ ಅವಧಿಯಲ್ಲಿ ಅಕಾಡೆಮಿ ಹಲವಾರು ವೈವಿಧ್ಯಮಯ ಯೋಜನೆಗಳನ್ನು ಹಮ್ಮಿಕೊಂಡಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಮಂಗಳೂರು ವಿಶ್ವವಿದ್ಯಾಲಯದ ಸಹಯೋಗದಲ್ಲಿ ೨೦೦೧ ಅಕ್ಟೋಬರ್‌ನಲ್ಲಿ ಡಾ॥ ಶಿವರಾಮ ಕಾರಂತ: ಸಾಂಸ್ಕೃತಿಕ ಅನುಸಂಧಾನ ಎಂಬ ಕಾರ್ಯಕ್ರಮದಲ್ಲಿ ನಮ್ಮ ನಾಡಿನ ಹೆಮ್ಮೆಯ ಈ ಹಿರಿಯ ಸಾಹಿತಿಯ ಜನ್ಮಶತಮಾನೋತ್ಸವ ವಿಚಾರ ಸಂಕಿರಣವನ್ನು ಅಕಾಡೆಮಿ ನಡೆಸಿತು.

ಅಕಾಡೆಮಿಯು ೨೦೦೨ರಲ್ಲಿ ರಾಜ್ಯಮಟ್ಟದ ಯುವ ಕವಿಗೋಷ್ಠಿಯನ್ನು ರಾಯಚೂರಿನಲ್ಲಿ ಹಮ್ಮಿಕೊಂಡಿತ್ತು. ರಾಯಚೂರಿನ ಶ್ರೀ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ರಂಗಸೌರಭದ ಸಹಯೋಗದೊಂದಿಗೆ ನಡೆದ ಈ ಗೋಷ್ಠಿಯನ್ನು ಉದ್ಘಾಟಿಸಿದ ಕಾಪಸೆಯವರು ಭಾಷೆಯ ಮೇಲೆ ಜಾಗತೀಕರಣದಿಂದ ಆಗುವಷ್ಟು ಆಘಾತ ಬೇರಾವುದರಿಂದಲೂ ಆಗದು ಎಂದರು.

ಡಾ. ಗುರುಲಿಂಗ ಕಾಪಸೆಯವರ ಅಧ್ಯಕ್ಷತೆಯ ಅವಧಿಯಲ್ಲಿ ಅಕಾಡೆಮಿಯ ಗೌರವ ಪ್ರಶಸ್ತಿ ಹಾಗೂ ಉತ್ತಮ ಕೃತಿಗಳ ಬಹುಮಾನ ವಿತರಣೆ ಸಮಾರಂಭವನ್ನು ಪ್ರಾತಿನಿಧಿಕವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲಾಯಿತು.
ಕಾಪಸೆಯವರ ಅವಧಿಯಲ್ಲಿ ನಮ್ಮ ನಾಡಿನ ಹಲವಾರು ಹಿರಿಯ ಸಾಹಿತಿಗಳ ಜನ್ಮಶತಮಾನೋತ್ಸವಗಳು ಬಂದದ್ದು ಒಂದು ವಿಶೇಷ ಸಂಗತಿ, ಅಂತಹ ಸಾಹಿತಿಗಳ ಬಗ್ಗೆ ಜನಸಾಮಾನ್ಯರಿಗೆ ತಿಳಿಸಿಕೊಡಲು ನಾಡಿನ ವಿವಿಧೆಡೆ ಅವರ ಜನ್ಮಶತಮಾನೋತ್ಸವ ಸಮಾರಂಭಗಳನ್ನು ನಡೆಸಲಾಯಿತು.

ಹೊಸ ಜಿಲ್ಲೆಯಾದ ಬಾಗಲಕೋಟೆಯಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದ ಸಹಯೋಗದೊಂದಿಗೆ ಕವಿ ಮಧುರಚೆನ್ನ, ಗದಗದಲ್ಲಿ ಜಡಭರತ, ಬಿಜಾಪುರದಲ್ಲಿ ಶ್ರೀರಂಗ, ಬೆಂಗಳೂರಿನಲ್ಲಿ ಗೊರೂರು, ಶಂಕರಘಟ್ಟದಲ್ಲಿ ಕುವೆಂಪು, ಕಾರ್ಕಳದಲ್ಲಿ ಕಡೆಂಗೋಡ್ಲು ಶಂಕರಭಟ್ಟ, ಚಡಚಣದಲ್ಲಿ ಸಿಂಪಿ ಲಿಂಗಣ್ಣ – ಹೀಗೆ ಸಾಹಿತ್ಯ ಸಾಧಕರ ಜನ್ಮ ಶತಮಾನೋತ್ಸವ ಸಮಾರಂಭಗಳು ಅದ್ದೂರಿಯಾಗಿ ನಡೆದವು. ತತ್ಸಂಬಂಧಿತ ವಿಚಾರ ಸಂಕಿರಣಗಳು ಜರುಗಿದವು. ಆ ಸಾಹಿತಿಗಳಲ್ಲಿ ಕೆಲವರ ಕೃತಿಗಳನ್ನು ಮರು ಪ್ರಕಟಿಸಲಾಯಿತು. ಕುವೆಂಪು ಅವರ 'ಬೆರಳ್ಗೆ ಕೊರಳ್', ಶೂದ್ರ ತಪಸ್ವಿ' ಹಾಗೂ 'ಜಲಗಾರ' ನಾಟಕಗಳನ್ನು ಒಂದಾಗಿಸಿ ಹೊರತಂದಿದ್ದು ಇದಕ್ಕೆ ಒಂದು ಉದಾಹರಣೆ. ಹಾಗೆಯೇ ಈ ಅವಧಿಯಲ್ಲಿ ಸಾಕಷ್ಟು ವಿಚಾರ ಸಂಕಿರಣಗಳೂ ನಡೆದವು. ಗುಲ್ಬರ್ಗ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದೊಂದಿಗೆ 'ದಲಿತ ಸಾಹಿತ್ಯ', ಶಿವಮೊಗ್ಗದಲ್ಲಿ ಕುವೆಂಪು ವಿಶ್ವವಿದ್ಯಾನಿಲಯ ಮತ್ತು ಶಿವಮೊಗ್ಗ ಕನ್ನಡ ಸಂಘದ

ಸಹಕಾರದೊಂದಿಗೆ 'ಜಾಗತೀಕರಣ', ವಿವಿಧ ಸ್ಥಳೀಯ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ಆನಂದಕಂಡ, ಬಸವರಾಜ ಕಟ್ಟೀಮನಿ, ಸೇಡಿಯಾಪು ಕೃಷ್ಣಭಟ್ಟ, ಹಾ.ಮಾ. ನಾಯಕ, ಮಹಾಕವಿ ಪಂಪ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಡಾ.ಎಲ್.ಬಸವರಾಜು, ಗೀತಾ ನಾಗಭೂಷಣ, ಪ್ರೊ. ಬರಗೂರು ರಾಮಚಂದ್ರಪ್ಪ, ಸುಜನಾ, ಪ್ರೊ॥ ವೇಣುಗೋಪಾಲ್ ಇವರ ಬದುಕು-ಬರಹಗಳು, ಚಾಮರಾಜನಗರದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಬೆಳವಣಿಗೆ, ಮಹಿಳಾ ಸಾಹಿತ್ಯ-ಹೀಗೆ ವೈವಿಧ್ಯಮಯ ವಿಷಯಗಳ ಬಗ್ಗೆ ರಾಜ್ಯಾದ್ಯಂತ ವಿಚಾರ ಸಂಕಿರಣಗಳು ನಡೆದವು.

ಬಾದಾಮಿಯಲ್ಲಿಯೇ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಚಿತ್ರಕಲಾ ವಿಭಾಗದ ಸಹಯೋಗದೊಂದಿಗೆ ಕಥಾ ಕಮ್ಮಟ, ವಿಮರ್ಶಾ ಕಮ್ಮಟ, ಗದಗ ಜಿಲ್ಲೆಯ ಸಿಂಗಟಾಲೂರಿನಲ್ಲಿ ಮಕ್ಕಳ ಸಾಹಿತ್ಯ ರಚನಾ ಕಮ್ಮಟಗಳನ್ನು ನಡೆಸಲಾಯಿತು. ಇವಿಷ್ಟಲ್ಲದೆ ಚಿತ್ರದುರ್ಗದ ಅಭಿರುಚಿ ಸಾಹಿತ್ಯಕ ಸಾಂಸ್ಕೃತಿಕ ವೇದಿಕೆ ಹಾಗೂ ಸಾಹಿತ್ಯ ಅಕಾಡೆಮಿ ಒಟ್ಟಾಗಿ ಜೋಗಿಮಟ್ಟಿ ಗಿರಿಧಾಮದಲ್ಲಿ 'ಶಿವರಾಮ ಕಾರಂತರ ವೈಚಾರಿಕತೆ: ಒಂದು ಹಿನ್ನೋಟ' ಈ ಬಗ್ಗೆ ಅಧ್ಯಯನ ಶಿಬಿರ ನಡೆಯಿತು. ಹಾವೇರಿ ಜಿಲ್ಲೆಯ ಶಿಶುನಾಳದಲ್ಲಿ ಕಾವ್ಯ ಕಮ್ಮಟವನ್ನು ಆಯೋಜಿಸಲಾಗಿತ್ತು. ಧಾರವಾಡದಲ್ಲಿ ಅಂತರ ಭಾರತಿ ಭಾಷಾ ಬಾಂಧವ್ಯ ಯೋಜನೆಯಡಿಯಲ್ಲಿ ಒಂದು ಅಪರೂಪದ ಸಂವಾದ ಕಾರ್ಯಕ್ರಮವನ್ನೂ ನಡೆಸಲಾಯಿತು. ಸ್ವಾತಂತ್ರ್ಯೋತ್ತರ ಕಾಲದ ಕನ್ನಡ ಮತ್ತು ಮರಾಠಿ ಸಾಹಿತ್ಯದ ಬಗ್ಗೆ ನಡೆದ ಈ ವಿಚಾರ ಸಂಕಿರಣದಲ್ಲಿ ಕಾಪಸೆಯವರೂ ಸೇರಿದಂತೆ ಮರಾಠಿ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರದ ಹಲವಾರು ಪ್ರಸಿದ್ಧ ಸಾಹಿತಿಗಳು ಭಾಗವಹಿಸಿದ್ದರು. ಕೊಳ್ಳೇಗಾಲದಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವ, ಸಿರಿಗೆರೆಯಲ್ಲಿ 'ನಮ್ಮವರ ನೆನಪು' ಕಾರ್ಯಕ್ರಮ, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ 'ನವೋದಯ ಹರಿಕಾರರು' ಸಂವಾದ ಕಾರ್ಯಕ್ರಮ, ಕಲಾಪ್ರತಿಭೋತ್ಸವ, ಮುಂಬೈಯಲ್ಲಿ ಹೊರನಾಡ ಕನ್ನಡ ಸಂಸ್ಕೃತಿ, ಸಮಾವೇಶಗಳು ಜರುಗಿದವು. ಈ ಅವಧಿಯಲ್ಲಿ ನಿಯತಕಾಲಿಕ ಹಾಗೂ ಹೊಸದಾಗಿ ಯೋಜಿಸಿದ್ದ ಕವಿ – ಕೃತಿ ಆಧುನಿಕ ಚಿಂತನಮಾಲೆಯ ಆರು ಕೃತಿಗಳೂ ಸೇರಿದಂತೆ ವಿವಿಧ ಮಾಲೆಯ ೪೮ ಕೃತಿಗಳು ಪ್ರಕಟಗೊಂಡವು.